**ದಿನಾಂಕ: 08-01-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಆರ್.ಎ.ಎಂ. ವಕೀಲರಿಂದ**

1. ನಾನು ಬಿ.ಇ. ಇಂಜಿನಿಯರಿಂಗ್ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾದ ಆಸ್ತಿಯ ಸ.ನಂ.106 ಇರುತ್ತದೆ. ಎಷ್ಟು ಎಕರೆ ಎಷ್ಟು ಗುಂಟೆ ಇದೆ ಎಂದರೆ 8 ಎಕರೆ 7 ಗುಂಟೆ ಇದೆ ಆದರೆ ನಾವು ಕೇಸ್ ಹಾಕಿರುವುದು 2 ಎಕರೆ ಜಮೀನಿಗೆ ಎಂದು ಉತ್ತರಿಸುತ್ತಾರೆ. ದಿನಾಂಕ 22-01-2022 ರಂದು ಕರಾರು ಪತ್ರ ಮಾಡಿಕೊಂಡಿರುತ್ತೇವೆ. ದಿನಾಂಕ 17-01-2022 ರಂದು ಖರೀದಿ ಕರಾರು ಪತ್ರ ಆಗಿರುತ್ತದೆ ಎಂದರೆ ಸರಿ. ರಿಜಿಸ್ಟರ್ ಆದ ದಿನ ಪ್ರತಿವಾದಿಗೆ ಯಾವ ರೀತಿ 8 ಲಕ್ಷ ಹಣ ಪಾವತಿ ಮಾಡಿದ್ದೀರಿ ಎಂದರೆ ನಗದು ರೂಪದಲ್ಲಿ ಎಂದು ಉತ್ತರಿಸುತ್ತಾರೆ. ಸದರಿ 8 ಲಕ್ಷ ಹಣ ಯಾವ ರೀತಿ ಡ್ರಾ ಮಾಡಿಕೊಂಡಿದ್ದೀರಿ ಎಂದರೆ ನಾನು ಜಾಬ್ ಮಾಡುತ್ತೇನೆ. ನಾನು ಫಾರೇನ್ ಗೆ ಹೋಗುತ್ತಿದ್ದೆ ನಮ್ಮ ಕಂಪನಿ ನನಗೆ ಯೂರೋ (Euro) ಕೊಡುತ್ತದೆ ಸದರಿ ಯೂರೋ (Euro) ವನ್ನು ನಗದು ಮಾಡಿ ಬೇಕಾದಾಗ ಖರ್ಚು ಮಾಡುತ್ತೇನೆ ಎಂದು ಉತ್ತರಿಸುತ್ತಾರೆ.

2. ಜನವರಿ-2022 ರಲ್ಲಿ ಎಷ್ಟು ಬಾರಿ ಬ್ಯಾಂಕಿನಿಂದ ಹಣವನ್ನು ಡ್ರಾ ಮಾಡಿದ್ದೀರಿ ಎಂದರೆ ಬ್ಯಾಂಕಿನಿಂದ ಡ್ರಾ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದ ATM ಬ್ಯಾಂಕಿಂಗ್ ಉಪಯೋಗಿಸುತ್ತೇನೆ ಎಂದು ಉತ್ತರಿಸುತ್ತಾರೆ. ಆ ದಿನ ಮನೆಯಲ್ಲಿ ಎಷ್ಟು ಹಣ ಇಟ್ಟಿದ್ದೀರಿ ಎಂದರೆ ಆ ದಿನ 10 ಲಕ್ಷ ಮನೆಯಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. 2018 ರಿಂದ ವಿಯಟ್ನಾಂಗೆ ಹೋಗುತ್ತಿದ್ದೇನೆ. ನೀವು ಆ ರೀತಿ ಹೋಗುತ್ತಿದ್ದೀರಿ ಎಂದು ತೋರಿಸಲು ನ್ಯಾಯಾಲಯಕ್ಕೆ ಪಾಸ್ ಪೋರ್ಟ್ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿಲ್ಲ ಎಂದು ಉತ್ತರಿಸುತ್ತಾರೆ.

3. ಪ್ರತಿವಾದಿ 8 ಲಕ್ಷ ಯಾವ ಕಾರಣಕ್ಕೆ ಕೇಳಿದ್ದರು ಎಂದರೆ ಸಾಕ್ಷಿಯು ಪ್ರತಿವಾದಿಯು ನಮಗೆ ಹಣ ಕೇಳಿಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ಅವರಿಗೆ ಏನೋ ಸಾಲ ಇತ್ತು ಎಂದು ನಮಗೆ ತಿಳಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಆ ರೀತಿ ಖರೀದಿ ಕರಾರು ಪತ್ರದಲ್ಲಿ ಬರೆದಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಪ್ರತಿವಾದಿಗೆ 8 ಲಕ್ಷ ಹಣ ಕೊಡುವಾಗ ಪ್ರತಿವಾದಿಯ ಹೆಂಡತಿಗಾಗಲೀ ಅವರ ಅಣ್ಣತಮ್ಮಂದಿರಿಗಾಗಲೀ, ತಾಯಿಗಾಗಲೀ ವಿಚಾರ ಮಾಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ.

4. ಹೊಲ ಎಲ್ಲಿ ಬರುತ್ತದೆ ಎಂದರೆ ಮಾರಡಗಿ ಎಸ್.ಎ. ರಲ್ಲಿ ಬರುತ್ತದೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿ ನಮಗೆ ಮಾವನಾಗಬೇಕು. ದಾವಾದ ಆಸ್ತಿಯ ಚೆಕ್ಕುಬಂದಿ ಹೇಳಲು ಬರುತ್ತಾ ಎಂದರೆ ಗೊತ್ತಿಲ್ಲ. ರಿಜಿಸ್ಟರ್ ಆಗುವ ದಿನ ಎಷ್ಟು ಜನ ಹೋಗಿದ್ದೀರಿ ಎಂದರೆ ನಮ್ಮ ಕಡೆಯಿಂದ ನಮ್ಮ ಮಾವನಾದ ಬೀರಪ್ಪ ಪೂಜಾರಿ ಮತ್ತು ಇನ್ನೊಬ್ಬರ ಹೆಸರು ನೆನಪು ಬರುತ್ತಿಲ್ಲ ಎಂದು ಉತ್ತರಿಸುತ್ತಾರೆ. ಬೀರಪ್ಪ ಪೂಜಾರಿ ನನ್ನ ತಾಯಿಯ ತಮ್ಮನಾಗಬೇಕು. ನಿಮ್ಮ ಸಾಕ್ಷಿ ಪ್ರಮಾಣ ಪತ್ರವನ್ನು ಓದಿ ಸಹಿ ಮಾಡಿದ್ದೀರಿ ಎಂದರೆ ಸರಿ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ಐ ಸ್ಟ್ಯಾ ಂಡ್ ಕಾಲೋನಿ ಶಹಾಬಾದ್ ಎಂದು ಬರೆಸಿದ್ದೀರಿ ಎಂದರೆ ಸರಿ.

5. 2 ಲಕ್ಷಕ್ಕಿಂತ ಹೆಚ್ಚಿಗೆ ಟ್ರಾಂಜಾಕ್ಷನ್ ಮಾಡಬೇಕಾದರೆ ಚೆಕ್ಕು ಕೊಡಬೇಕು ಎಂದರೆ ನಾವು ಕ್ಯಾಶ್ ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ಸದರಿ 8 ಲಕ್ಷ ಹಣವನ್ನು ಸಬ್ ರಿಜಿಸ್ಟ್ರಾರ್ ಕಚೇರಿಗೆ ಯಾವ ರೀತಿ ತಂದಿರುತ್ತೀರಿ ಎಂದರೆ ಬ್ಯಾಗಿನಲ್ಲಿ ಇಟ್ಟುಕೊಂಡು ಕಾರಿನಲ್ಲಿ ತಂದಿರುತ್ತೇನೆ ಎಂದು ಉತ್ತರಿಸುತ್ತಾರೆ. ನಾನು Income Tax Return file ಮಾಡುತ್ತೇನೆ. Income Tax Return file ಮಾಡಿರುವುದು ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯು ನಿಮ್ಮ ಹತ್ತಿರ

8 ಲಕ್ಷ ಹಣ ನಗದು ಪಡೆದುಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರಕ್ಕೆ ಪ್ರತಿವಾದಿಯ ಹೆಂಡತಿಯ ಸಮ್ಮತಿ ಸಾಕ್ಷಿ ಪಡೆದುಕೊಳ್ಳಲು ಪ್ರಯತ್ನ ಮಾಡಿದ್ದೀರಾ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ವ್ಯವಹಾರ ಮಾಡುವಾಗ ಅವರ ಕುಟುಂಬದವರಿಗೆ ಇಷ್ಟು ಲಕ್ಷ ಕೊಡುತ್ತಾರೆ ಎಂದು ಹೇಳುತ್ತಾರೆ ಎಂದರೆ ನಮ್ಮ ಮಾವನ ಜೊತೆಯಲ್ಲಿ ಮಾತ್ರ Discussion ಆಗಿದೆ ಎಂದು ಉತ್ತರಿಸುತ್ತಾರೆ.

6. ಪ್ರತಿವಾದಿಯು ಸಂಬಂಧಿಕರೆಂದು ನಿಮ್ಮ ಮನೆಗೆ ಬಂದಾಗ ಪ್ರತಿವಾದಿಗೆ ಕುಡಿಸಿ ಅವರು ನಶೆಯಲ್ಲಿದ್ದಾಗ ಅವರ ಆಸ್ತಿಯು ಬೆಲೆ ಬಾಳುವ ಆಸ್ತಿ ಆಗಿದ್ದರಿಂದ ಅವರಿಗೆ ಸಬ್ ರಿಜಿಸ್ಟ್ರಾರ್ ಕಚೇರಿಗೆ ಒತ್ತಾಯಪೂರ್ವಕವಾಗಿ ಕರೆದುಕೊಂಡು ಹೋಗಿ ಖರೀದಿ ಕರಾರು ಪತ್ರವನ್ನು ಮಾಡಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರದಲ್ಲಿ ಇರುವ ಎಲ್ಲಾ ಸಾಕ್ಷಿದಾರರು ನಿಮ್ಮ ಸಂಬಂಧಿಕರಾಗಬೇಕು ಎಂದರೆ ಸಾಕ್ಷಿಯು ಸದರಿ ಸಾಕ್ಷಿದಾರರು ಅವರಿಗೂ ಸಹ ಪರಿಚಯ ಇದ್ದಾರೆ ಎಂದು ಉತ್ತರಿಸುತ್ತಾರೆ. ಪ್ರತಿವಾದಿಯು ನಿಮ್ಮ ಜೊತೆಯಲ್ಲಿ ಯಾವುದೇ ರೀತಿಯ ವ್ಯವಹಾರ ಮಾಡಿಲ್ಲದಿದ್ದರೂ ಸಹ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಖೊಟ್ಟಿ ದಾವೆ ಮಾಡಿದ್ದೀರಿ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ